ಓ.ಎಸ್. ನಂ. 26-2016
ಪಿ.ಡಬ್ಲ್ಯೂ-1

(ಇಂದು ದಿಃ 07-12-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು)

ಪಾಟೀ ಸವಾಲು **:-** ಶ್ರೀ **N.R.** ವಕೀಲರಿಂದ **:-**

ನನ್ನ ತಂದೆಯ ಹೆಸರು ಸಾಬಣ್ಣ ತಂದೆ ಕಾಶಪ್ಪ ಹೊನ್ನಾಯಿ ಎಂದರೆ ಸರಿ . ನನ್ನ ತಂದೆಗೆ ಇಬ್ಬರು ಹೆಂಡತಿಯರು ಎಂದರೆ ಸರಿಯಲ್ಲ. ಹಿರಿಯ ಹೆಂಡತಿಗೆ ಮೂರು ಜನ ಅಂದರೆ ಭೀಮಣ್ಣ , ದ್ಯಾವೆಪ್ಪ ಮತ್ತು ಕಾಶಪ್ಪ ಮೂರು ಜನ ಮಕ್ಕಳು ಎಂದರೆ ಸರಿಯಲ್ಲ. ನಾನು ಎರಡನೆ ಹೆಂಡತಿಯ ಮಗ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಹೆಸರಿನಲ್ಲಿ 1987 ರಲ್ಲಿ ಮುಟೇಶನ್ ಆಗಿದೆ ಎಂದರೆ ಸರಿಯಲ್ಲ. ನನ್ನ ತಂದೆ ಸಾಬಣ್ಣ 8 ಎಕರೆ 19 ಗುಂಟೆ ಪೈಕಿ 6 ಎಕರೆ 19 ಗುಂಟೆ ಜಮೀನನ್ನು 1 ನೇ ಪ್ರತಿವಾದಿಯ ಮಾವನಿಗೆ 1976 ರಲ್ಲಿ ಮಾರಾಟ ಮಾಡಿದರು ಎಂದರೆ ಸರಿಯಲ್ಲ. ನನ್ನ ತಂದೆ ಮಾರಾಟ ಮಾಡಿ ಸ್ವಾದೀನತೆ ಬಿಟ್ಟು ಕೊಟ್ಟಿದ್ದ ಎಂದರೆ ಸರಿಯಲ್ಲ . 1 ನೇ ಪ್ರತಿವಾದಿ ಮಾವ ದಾವಪ್ಪ ಮತ್ತು ಭೀಮಶಪ್ಪನ ಕಡೆಯಿಂದ ಅರ್ಜಿ ಕೊಡಿಸಿ ದಾವಾ ಸೊತ್ತನ್ನು 1 ನೇ ಪ್ರತಿವಾದಿ ಹೆಸರಿಗೆ ಮಾಡಿಸಿದ ಎಂದರೆ ಸರಿಯಲ್ಲ. ಅದನ್ನು ಪ್ರಶ್ನಿಶ ದಾವೆಪ್ಪ ಮತ್ತು ಭೀಮಶಾ AC ರವರ ನ್ಯಾಯಾಲಯದಲ್ಲಿ ಅಫೀಲು ನಂ 40/88-89 ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಅಫೀಲು ವಜಾ ಆಯಿತು ಎಂದರೆ ಸರಿಯಲ್್. ನನ್ನ ತಂದೆ ತೀರಿ ಹೋಗಿ ಈಗ 38 ವರ್ಷ ಆಗಿದೆ ಎಂದರೆ 30-35 ಎಂದು ಹೇಳುತ್ತಾರೆ . ನಾವು 4 ಜನ ಭಾಗ ಮಾಡಿಕೊಳ್ಳಬೇಕೆಂದು ಬಾಕಿ 2 ಎಕರೆ 2000 ರ ವರೆಗೆ ನನ್ನ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ 2 ಎಕರೆ ಇವತ್ತಿಗೂ ನನ್ನ ತಂದೆಯ ಹೆಸರಿನಲ್ಲಿದೆ .

ನಾನು ನೌಕರಿಯಲ್ಲಿ ಇದ್ದಾಗ ವರ್ಷಕೆಕ 1-2 ಬಾರಿ ಗ್ರಾಮಕ್ಕೆ ಬರುತ್ತಿದ್ದೆ. ಆ ರೀತಿ ಬಂದಾಗ ಪಹಣಿ ನೋಡಿಲ್ಲ ನನ್ನ ತಂದೆ ತೀರಿ ಹೋದ ನಂತರ ಬಾಕಿ 2 ಎಕರೆ ಜಮೀನನ್ನು ನನ್ನ ಹೆಸರಿಗೆ ಏಕೆ ಮಾಡಿಕೊಂಡಿಲ್ಲ ಎಂದರೆ ಹೇಳಲು ಆಗುವುದಿಲ್ಲ. 1 ನೆ ಪ್ರತಿವಾದಿಯ ಗಂಡನ ಸಹೋದರರು ದಾವಾ ಸೊತ್ತನ್ನು ಭಾಗ ಮಾಡಿಕೊದದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಜಮೀನು ನೊಡಿದ್ದೇನೆ ಅದು ಬಿಳು ಬಿದ್ದಿದೆ . ಜಮೀನು ಈಗ 6 ತುಕಡಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 6 ಎಕರೆ 19 ಗುಂಟೆ ಪಕ್ಕದಲ್ಲಿ 1 ನೇ ಪ್ರತಿವಾದಿಯ ಮಾವ 8 ಎಕರೆ ಜಮೀನು ಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಗಂಡ , ನಾಗ ರೆಡ್ಡಿ ಮತ್ತು ಹನುಮಂತ ರೆಡ್ಡಿ ಹೆಂಡತಿ ವೇಂಕಟಮ್ಮ 8 ಎಕರೆ ಮತ್ತು ದಾವಾ ಸೊತ್ತನ್ನು ಭಾಗ ಮಾಡಿಕೊಂಡಿದಾರೆ ಎಂದರೆ ಸರಿಯಲ್ಲ. ಭಾಗದ ಪ್ರಕಾರ ಅವರ ಹೆಸರಿಗೆ ಪಹಣಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯ ಗಂಡನ ತಮ್ಮಂದಿರು ತಮ್ಮ ಭಾಗದ ಸ್ವತ್ತುಗಳನ್ನು ಬೇರೆಯವರಿಗೆ ಅಂದರೆ

5 ಮತ್ತು 6 ನೇ ಪ್ರತಿವಾದಿಯರಿಗೆ ಮಾರಾಟ ಮಾಡಿದಾದರೆ ಎಂದರೆ ನನಗೆ ಗೊತ್ತಿಲ್ಲ. 3 ಮತ್ತು 4 ನೇ ಪ್ರತಿವಾದಿಯರಿಂದ ಜಮೀನುಗಳನ್ನು ಖರೀದಿ ಮಾಡಿದ ನಂತರ 5 ಮತ್ತು 6 ನೇ ಪ್ರತಿವಾದಿಯರು ಸ್ವಾಧೀನದಲ್ಲಿದಾದರೆ ಎಂದರೆ ಸರಿಯಲ್ಲ.

1 ನೇ ಪ್ರತಿವಾದಿಯ ಮಾವ 1976 ರಲ್ಲಿ ಖರೀದಿ ಮಾಡಿದ ದಿನದಿಂದ ಸ್ವಾಧೀನದಲ್ಲಿದ್ದರು ಮತ್ತು ಅವರು ತೀರಿ ಹೋದ ನಂತರ ಅವರ ಮಕ್ಕಳು ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ. 1976 ರಿಂದ ಖರೀದಿ ಆಧಾರದ ಮೇಲೆ ಸ್ವಾಧೀನದಲ್ಲಿರುವ ಕಾರಣ ಅವರೇ ಮಾಲೀಕರು ಎಂದರೆ ಸರಿಯಲ್ಲ. AC ರವರ ಆಧೇಶವನ್ನು ನಾನು ಪ್ರಶ್ನೆ ಮಾಡಿಲ್ಲ.

(N.R. ವಕೀಲರ ವಿನಂತಿ ಮೇರೆಗೆ ಮುಂದು ವರೆದ ಪಾಟೀ ಸವಾಲಿಗೆ ಮುಂದುಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ. ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಸೇಡಂ.